

ಅಜ್ಜಿ, ಮೊಮ್ಮಗಳ ಜತೆ

# ‘ಯಂಗ್’ ಅಜ್ಜಿ!

ಕೆಲವರು 23ರ ಹರೆಯದಲ್ಲಿ ಮದುವೆಯಾಗುತ್ತಾರೆ. ಇನ್ನು ಕೆಲವರು ಆ ವಯಸ್ಸಿಗೇ ತಾಯಿ ಆಗಿರುತ್ತಾರೆ. ಆದರೆ 23ರ ಹರೆಯದಲ್ಲೇ ಅಜ್ಜಿ ಆಗುವುದೆಂದರೆ?!

ನಂಬೋದು ಕಷ್ಟ ಅಲ್ವೆ? ನಂಬ್ತೀರೋ ಬಿಡ್ತೀರೋ ನಮಗೆ ಗೊತ್ತಿಲ್ಲ– ರೊಮಾನಿಯಾದ ರಿಫ್ಕಾ ಸ್ಟ್ಯಾನೆಸ್ಕು ಕೇವಲ 23 ವರ್ಷಕ್ಕೇ ಅಜ್ಜಿಯ ಪಟ್ಟ ಧರಿಸಿರುವುದಂತೂ ನಿಜ. ಬ್ರಿಟಿಷ್ ಟ್ಯಾಬ್ಲಾಯ್ಡ್ ‘ದಿ ಸನ್’ ವರದಿಯ ಪ್ರಕಾರ ಈಕೆಯೇ ಪ್ರಪಂಚದ ಅತಿ ಕಿರಿಯ ವಯಸ್ಸಿನ ಅಜ್ಜಿ.

ಈಕೆಗೆ 12 ವರ್ಷ ವಯಸ್ಸಾದಾಗಲೇ ಮದುವೆಯಾಗಿ ಮೊದಲ ಮಗು ಮಾರಿಯಾಗೆ ಜನ್ಮ ನೀಡಿದ್ದಾಳೆ. ಮಗಳು ಮಾರಿಯಾ ಸಹ ಅಮ್ಮನಿಗಿಂತ ನಾನೇನು ಕಮ್ಮಿ ಎಂದುಕೊಂಡು ಹೆರುವುದರಲ್ಲಿ ಹಿಂದೆ ಬಿದ್ದಿಲ್ಲ. ಈಕೆ ತನ್ನ ತಾಯಿಗಿಂತ 1 ವರ್ಷ ಮೊದಲೇ ಅಂದರೆ 11 ವರ್ಷ ವಯಸ್ಸು ಆಗಿದ್ದಾಗಲೇ, ಗಂಡು ಮಗು ಇಯಾನ್‌ನನ್ನು ಹೆತ್ತಿದ್ದಾಳೆ! ಈಗ ಇಯಾನ್‌ಗೆ 2 ವರ್ಷ ವಯಸ್ಸು.

ಆದರೆ ತಾನೇ ವಿಶ್ವದ ಅತ್ಯಂತ ಕಿರಿಯ ವಯಸ್ಸಿನ ಅಜ್ಜಿ ಎನ್ನುವ ಸಂಗತಿ ಸ್ಟ್ಯಾನೆಸ್ಕುವಿಗೆ ಮುಜುಗರವನ್ನು ಉಂಟು ಮಾಡಿದೆಯಂತೆ. ಏನು ಮಾಡೋಕಾಗುತ್ತೆ.. ಹೆರೋ ಮುಂಚೆ ಆಲೋಚಿಸಬೇಕಿತ್ತು, ಅಲ್ವೆ?

■ ವಿದ್ಯಾ. ವಿ.ಹಾಲಭಾವಿ